# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

## ಮಾದರಿ ಪ್ರಶ್ನೆ ಪತ್ರಿಕೆ: 2018–19

## ವಿಷಯ: ಅರ್ಥಶಾಸ್ತ್ರ

**ಪ್ರಶ್ನೆಗಳ ಸಂಖ್ಯೆ: 57** | **ವಿಷಯ ಸಂಕೇತ: 96K**
**ಸಮಯ: 3 ಗಂಟೆ** | **ಅಂಕಗಳು: 100**

---

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಸರಿಯಾದ ಉತ್ತರ ಮಾತ್ರ ಸರಿಯಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಉತ್ತರ ಪತ್ರಿಕೆಯಲ್ಲಿ ಬರೆಯಿರಿ.** **10x1=10**

1. ಇದು ಕಾಗೆ ಬಂಗಾರ
   ಎ) ತಾಮ್ರ ಬಿ) ಅಭ್ರಕ ಸಿ) ಮ್ಯಾಂಗನೀಸ್ ಡಿ) ಬಾಕ್ಸೈಟ್
2. ಭಾರತದ ಮೊದಲ ಅಣುಶಕ್ತಿ ಕೇಂದ್ರ
   ಎ) ಕಲ್ಪಕಂ ಬಿ) ನರೋರ ಸಿ) ತಾರಾಪುರ ಡಿ) ಕೈಗಾ
3. ಅಲೋಹ ಖನಿಜ ಸಂಪನ್ಮೂಲಗಳಿಗೆ ಉದಾಹರಣೆ
   ಎ) ಬೆಳ್ಳಿ ಬಿ) ಕಬ್ಬಿಣದ ಅದಿರು ಸಿ) ಚಿನ್ನ ಡಿ) ಮೈಕಾ
4. ಭಾರತದಲ್ಲಿ ಅತಿ ಕಡಿಮೆ ಜನಸಂದ್ರತೆ ಹೊಂದಿರುವ ರಾಜ್ಯ
   ಎ) ಅರುಣಾಚಲಪ್ರದೇಶ ಬಿ) ಗೋವಾ ಸಿ) ಸಿಕ್ಕಿಂ ಡಿ) ತ್ರಿಪುರ
5. ಭಾರತದಲ್ಲಿ ಮರಣದರ ಇಳಿಕೆಗೆ ಕಾರಣ
   ಎ) ಅನಕ್ಷರತೆ ಸಿ) ಅವಿಭಕ್ತ ಕುಟುಂಗ
   ಬಿ) ಸಾಂಕ್ರಮಿಕ ರೋಗಗಳ ನಿಯಂತ್ರಣ ಡಿ) ಸಾರ್ವತ್ರಿಕ ವಿವಾಹ
6. ಭಾರತ ಸರ್ಕಾರವು ಹೊಸ ರಾಷ್ಟ್ರೀಯ ಜನಸಂಖ್ಯಾ ನೀತಿಯನ್ನು ಘೋಷಿಸಿದ ವರ್ಷ
   ಎ) 2000 ಬಿ) 1952 ಸಿ) 1977 ಡಿ) 1986
7. ಕರ್ನಾಟಕದಲ್ಲಿರುವ ರೈಲ್ವೆವಯಲವೆಂದರೆ
   ಎ) ಈಶಾನ್ಯ ರೈಲ್ವೆ ಬಿ) ನೈಋತ್ಯ ರೈಲ್ವೆ ಸಿ) ದಕ್ಷಿಣ ರೈಲ್ವೆ ಡಿ) ಪೂರ್ವ ರೈಲ್ವೆ
8. ನೈಸರ್ಗಿಕ ವಿಪತ್ತುಗಳು ಸಂಭವಿಸಿದಾಗ ಹಾಗೂ ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ಪರಿಹಾರ ಕಾರ್ಯಾಚರಣೆ ಕೈಗೊಳ್ಳಲು ಸಹಾಯವಾಗುವ ಸಾರಿಗೆ ವ್ಯವಸ್ಥೆ
   ಎ) ರಸ್ತೆ ಸಾರಿಗೆ ಬಿ) ರೈಲು ಸಾರಿಗೆ ಸಿ) ಜಲ ಸಾರಿಗೆ ಡಿ) ವಾಯು ಸಾರಿಗೆ
9. ಆಂತರಿಕ ಜಲಸಾರಿಗೆ ನಿರ್ದೇಶನಾಲಯವನ್ನು ಭಾರತದಲ್ಲಿ ಸ್ಥಾಪಿಸಲು ಕಾರಣ
   ಎ) ಒಳನಾಡಿನ ಜಲಸಾರಿಗೆಯನ್ನು ಅಭಿವೃದ್ಧಿಪಡಿಸಲು ಸಿ) ತೈಲೋತ್ಪನ್ನಗಳನ್ನು ಸಾಗಿಸಲು

ಬಿ) ಸಮುದ್ರ ಸಾರಿಗೆಯನ್ನು ಅಭಿವೃದ್ಧಿಪಡಿಸಲು    ಡಿ) ತೀರ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು

10. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಧಾನ ಕಛೇರಿ ಇರುವುದು

ಎ) ಕೊಲ್ಕತ್ತಾ    ಬಿ) ನವದೆಹಲಿ    ಸಿ) ಬೆಂಗಳೂರು    ಡಿ) ಮುಂಬೈ

**II ‘ಅ’ ಪಟ್ಟಿಯನ್ನು ‘ಈ’ ಪಟ್ಟಿಯೊಂದಿಗೆ ಹೊಂದಿಸಿ ಉತ್ತರಗಳನ್ನು ಬರೆಯಿರಿ:** **1x5=5**

| | ‘ಅ’ ಪಟ್ಟಿ | | ‘ಈ’ ಪಟ್ಟಿ |
|---|---|---|---|
| 11. | a) ಭಾರತದ ರಾಷ್ಟ್ರೀಯ ಕಾರ್ಮಿಕ ಸಂಘಗಳ ಕಾಂಗ್ರೆಸ್ | i) | ಸಮಾಜವಾದಿ ಪಕ್ಷದ ನಿಯಂತ್ರಣ |
| | b) ಭಾರತದ ಕೇಂದ್ರ ಕಾರ್ಮಿಕ ಸಂಘ | ii) | ಸೋಶಿಯಲಿಸ್ಟ್ ಪಕ್ಷದ ನಿಯಂತ್ರಣ |
| | c) ಅಖಿಲ ಭಾರತೀಯ ಮಜದೂರ್ ಸಂಘ | iii) | ಕಮ್ಯುನಿಸ್ಟ್ ಪಕ್ಷದ ನಿಯಂತ್ರಣ |
| | d) ಹಿಂದ್ ಮಜದೂರ್ ಸಭಾ | iv) | ಕಾಂಗ್ರೆಸ್ ಪಕ್ಷದ ನಿಯಂತ್ರಣ |
| | e) ಸಂಯುಕ್ತ ಕಾರ್ಮಿಕ ಸಂಘಗಳ ಕಾಂಗ್ರೆಸ್ | v) | ಭಾರತೀಯ ಜನತಾ ಪಕ್ಷದ ನಿಯಂತ್ರಣ |
| | | vi) | ಸ್ವಾಯತ್ತ ಸಂಘಗಳು |

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:** **15x1=15**

12. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರೂಪಿಸಲು ಕಾರಣವೇನು?
13. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವನ್ನು ಯಾವಾಗ ರಾಷ್ಟ್ರೀಕರಣಗೊಳಿಸಲಾಯಿತು?
14. ಭೂ ಬಳಕೆ ಎಂದರೇನು?
15. ಪವನ ಶಕ್ತಿಯನ್ನು ಎಲ್ಲಾ ಪ್ರದೇಶಗಳೆಲ್ಲಾ ಉತ್ಪಾದಿಸಲು ಸಾಧ್ಯವಿಲ್ಲ. ಏಕೆ?
16. ಜನಸಾಂದ್ರತೆಯನ್ನು ಹೇಗೆ ಪಡೆಯಲಾಗುತ್ತದೆ?
17. ಹಸಿರು ಕ್ರಾಂತಿ ಎಂದರೇನು?
18. ಮಧ್ಯವರ್ತಿಗಳ ನಿರ್ಮೂಲನೆಯ ಕಾಯ್ದೆಯನ್ನು ಮೊದಲಬಾರಿಗೆ ಜಾರಿಗೆ ತಂದ ರಾಜ್ಯವನ್ನು ಹೆಸರಿಸಿ.
19. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಏಕೆ ಸ್ಥಾಪಿಸಲಾಗಿದೆ?
20. ವ್ಯಾಪಾರಸ್ಥರು ಹಾಗೂ ದಲ್ಲಾಳಿಗಳು ಕೃಷಿಕರಿಗೆ ಯಾವ ನಿಬಂಧನೆಯ ಮೇರೆಗೆ ಬೆಳೆ ಸಾಲವನ್ನು ನೀಡುತ್ತಾರೆ?
21. ಕೈಗಾರೀಕರಣದ ಮಹತ್ವನ್ನು ಸರ್.ಎಂ.ವಿಶ್ವೇಶ್ವರಯ್ಯನವರು ಹೇಗೆ ಸಾರಿದ್ದಾರೆ?
22. 20 ಅಂಶಗಳ ಕಾರ್ಯಕ್ರಮದ ಪ್ರಮುಖ ಉದ್ದೇಶವೇನು?
23. ಬಡತನ ಎಂದರೇನು?
24. ಬ್ರಿಟಿಷರು ಭಾರತದಲ್ಲಿ ರೈಲು ಸಾರಿಗೆಯನ್ನು ಅಭಿವೃದ್ಧಿಪಡಿಸಲು ಕಾರಣವೇನು?
25. ಸಾಮಾಜಿಕ ಪರಿವರ್ತನೆಯಲ್ಲಿ ಸಂಪರ್ಕದ ಪಾತ್ರವೇನು?
26. ಸ್ಮಿಥ್‌ರವರು ಕೇಂದ್ರ ಬ್ಯಾಂಕನ್ನು ಹೇಗೆ ವ್ಯಾಖ್ಯಾನಿಸಿದ್ದಾರೆ?

**IV ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ:** **14x2=28**

27. ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಹೆಸರಿಸಿ.
28. ಭೂಸವೆತದದಿಂದಾಗುವ ದುಷ್ಪರಿಣಾಮಗಳು ಯಾವುವು?
29. ಭೌಗೋಳಿಕ ಪ್ರದೇಶವು ಜನಸಾಂದ್ರತೆಯನ್ನು ಪ್ರಭಾವಿಸುವ ಒಂದು ಪ್ರಬಲವಾದ ಅಂಶವಾಗಿದೆ. ಹೇಗೆ?
30. ಹೆಚ್ಚುತ್ತಿರುವ ಜನಸಂಖ್ಯೆಯು ಸಾಮಾಜಿಕ ಸೌಲಭ್ಯಗಳ ಹೊರೆಯನ್ನು ಹೆಚ್ಚಿಸುತ್ತಿವೆ. ಹೇಗೆ?
31. ರೈತವಾರಿ ಪದ್ಧತಿಯು ಜಮೀನ್ದಾರಿ ಪದ್ಧತಿಗಿಂತ ಹೇಗೆ ಭಿನ್ನವಾಗಿದೆ?
32. ಕೃಷಿ ಹಣಕಾಸಿನಲ್ಲಿ ಲೇವಾದೇವಿಗಾರರ ಪಾತ್ರವೇನು?
33. ಕೃಷಿ ಹಣಕಾಸಿನ ಅಗತ್ಯತೆ ಏನು?
34. ಜಿಲ್ಲಾ ಕೈಗಾರಿಕಾ ಕೇಂದ್ರಗಳು ನಿರ್ವಹಿಸುವ ಕಾರ್ಯಗಳು ಯಾವುವು?
35. ಕೈಗಾರಿಕಾ ಕಾರ್ಮಿಕರ ಲಕ್ಷಣಗಳನ್ನು ಪಟ್ಟಿಮಾಡಿ.
36. ಅತಿಯಾದ ಜನಸಂಖ್ಯೆ ಮತ್ತು ನಿರುದ್ಯೋಗವು ಹೇಗೆ ಬಡತನಕ್ಕೆ ಕಾರಣವಾಗಿದೆ?
37. ಭಾರತದ ಬ್ಯಾಂಕ್ ವಿದೇಶಿ ವಿನಿಮಯದ ಪ್ರಮುಖ ನಿರ್ವಾಹಕ, ಹೇಗೆ?
38. ಇತ್ತೀಚಿನ ವರ್ಷಗಳಲ್ಲಿ ಭಾರತವು ಸೇವೆಗಳ ರಫ್ತಿನಲ್ಲಿ ಪ್ರಮುಖ ದೇಶವಾಗಿ ಹೊರಹೊಮ್ಮಿದೆ. ಹೇಗೆ?
39. ರಿಸರ್ವ್ ಬ್ಯಾಂಕ್ ವಿದೇಶಿ ವಿನಿಮಯದ ಪ್ರಮುಖ ನಿರ್ವಾಹಕ. ಹೇಗೆ?
40. ಭಾರತದ ಪ್ರಮುಖ ಆಮದುಗಳನ್ನು ಪಟ್ಟಿಮಾಡಿ.
41. ಒಂದು ರಾಷ್ಟ್ರವು ಬಡರಾಷ್ಟ್ರವಾಗಿದೆ. ಏಕೆಂದರೆ ಅದು ಬಡತನದಲ್ಲಿದೆ. ವಿವರಿಸಿ.
42. ದೇಶದ ಆರ್ಥಿಕ ಅಭಿವೃದ್ಧಿಯನ್ನು ನೈಸರ್ಗಿಕ ಸಂಪನ್ಮೂಲಗಳ ಪಾತ್ರವೇನು?
43. ಮಾನವ ಶಕ್ತಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಅನುಸರಿಸುವ ಪ್ರಮುಖ ನಾಲ್ಕು ಹಂತಗಳನ್ನು ಹೆಸರಿಸಿ.

44. ಹಸಿರು ಕ್ರಾಂತಿಯು ಜನರ ಆರೋಗ್ಯದ ಮೇಲೆ ಹೇಗೆ ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತದೆ?
45. ಕೃಷಿ ಹಣಕಾಸಿನ ಪ್ರದೇಶಿಕ ಗ್ರಾಮೀಣ ಬ್ಯಾಂಕುಗಳ ಪಾತ್ರ ಪ್ರಮುಖವಾಗಿದೆ. ಹೇಗೆ?
46. ಸಣ್ಣ ಪ್ರಮಾಣದ ಕೈಗಾರಿಕೆಗಳ ಲಕ್ಷಣಗಳು ಯಾವುವು?
47. ಕೃಷಿ ಕಾರ್ಮಿಕರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವು ಉತ್ತಮವಾಗಿಲ್ಲ. ಹೇಗೆ?
48. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತಾ ಯೋಜನೆಯ ಉದ್ದೇಶಗಳೇನು?
49. ಭಾರತದಲ್ಲಿ ರಸ್ತೆಗಳನ್ನು ಹೇಗೆ ವಿಂಗಡಿಸಲಾಗಿದೆ?
50. ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ಮೇಲ್ವಿಚಾರಣಾ ಮಂಡಳಿಯ ಪ್ರಮುಖ ಕಾರ್ಯಗಳು ಯಾವುವು?

**V ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

51. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಲಕ್ಷಣಗಳು ಯಾವುವು?
52. ನಬಾರ್ಡ್‌ನ ಪ್ರಮುಖ ಕಾರ್ಯಗಳನ್ನು ತಿಳಿಸಿ.
53. ಸಣ್ಣ ಕೈಗಾರಿಕೆಗಳ ಸಮಸ್ಯೆಗಳನ್ನು ಪಟ್ಟಿಮಾಡಿ.
54. ನಗರ ಪ್ರದೇಶದ ಬಡತನ ನಿರ್ಮೂಲನಾ ಕಾರ್ಯಕ್ರಮಗಳನ್ನು ಹೆಸರಿಸಿ.
55. ಭಾರತೀಯ ರಿಸರ್ವ್ ಬ್ಯಾಮಕಿನ ತರಬೇತಿ ಸಂಸ್ಥೆಗಳು ಯಾವುವು?
56. ಅಂತರರಾಷ್ಟ್ರೀಯ ವ್ಯಾಪಾರವು ಆಧುನಿಕ ಜಗತ್ತಿನಲ್ಲಿ ಅನಿವಾರ್ಯವಾಗಿದೆ. ವಿವರಿಸಿ.

**V ಈ ಪ್ರಶ್ನೆಗೆ ಉತ್ತರಿಸಿರಿ: 1x4=4**

57. ಹಸಿರು ಕ್ರಾಂತಿಯು ಒಳಗೊಂಡಿರುವ ಪ್ರಮುಖ ವಿಧಾನಗಳು ಯಾವುವು?

* * * * *